# ನಿತ್ಯ ತೆರೆ ಮೇಲೆ ಜನಪ್ರಿಯತೆಗೆ ಕಾರಣ

**ಹಂಸ,** ‘ಚಿಕ್ಕಮ್ಮ’ ಧಾರಾವಾಹಿಯ ರಾಜೇಶ್ವರಿ (ಪುಟ್ಟಿ)

*ಹಂಸ ಅಂದ ತಕ್ಷಣ ಖಳನಾಯಕಿ ಪಾತ್ರಗಳಲ್ಲೇ ಹೆಚ್ಚು ನೆನಪಿಸಿಕೊಳ್ತಾರಲ್ಲ...*

ನೆಗೆಟಿವ್ ಪಾತ್ರಗಳಲ್ಲಿ ಹೆಚ್ಚು ಹೈಲೈಟ್ ಆಗಿದ್ದೀನಿ. ಆದರೆ ನಾನು ಎಲ್ಲ ರೀತಿ ಪಾತ್ರಗಳಲ್ಲೂ ಮಾಡಿದ್ದೇನೆ.

*ಹೆಸರು ತಂದುಕೊಟ್ಟಿರೋದು ನೆಗೆಟಿವ್ ಪಾತ್ರಗಳು. ಅಂತಹ ಪಾತ್ರಗಳಲ್ಲಿ ಅಭಿನಯಿಸೋದು ಕಷ್ಟ ಅಂತಾರಲ್ಲ?*

ಇಷ್ಟಪಟ್ಟರೆ ಯಾವುದೂ ಕಷ್ಟ ಇಲ್ಲ. ‘ಪ್ರೇರಣಾ’ದಲ್ಲಿ ಪಾಸಿಟಿವ್ ಪಾತ್ರ ಇದೆ. ‘ಚಂದ್ರಿಕಾ’ದಲ್ಲಿ ಚಂದ್ರಿಕಾಳ ಪಾತ್ರ ಹೆಚ್ಚು ಹೆಸರು ತಂದುಕೊಡ್ತು.

*ತುಸು ಎತ್ತರ, ಸ್ನಿಗ್ಧ ಸೌಂದರ್ಯ– ಎಲ್ಲ ಪಾತ್ರಕ್ಕೂ ಸರಿ ಹೊಂದುವ ಪರ್ಸನಾಲಿಟಿ ಇದೆ. ವ್ಯಾಯಾಮ ಮಾಡ್ತೀರಾ?*

ಏರೋಬಿಕ್ಸ್‌ಗೆ ಹೋಗ್ತಾ ಇದ್ದೆ. ಈಗ ಯೋಗ ಮತ್ತು ವಾಕಿಂಗ್ ಮಾಡ್ತೀನಿ. ಮಗು ಆದಮೇಲೆ ಸ್ವಲ್ಪ ದಪ್ಪ ಆಗಿದ್ದೆ. ಮತ್ತೆ ನಿಯಂತ್ರಣಕ್ಕೆ ತಂದೆ.

*ಪತಿ ಏನ್ಮಾಡ್ತಾರೆ? ತವರು ಮನೆ, ಗಂಡನ ಮನೆಗಳಲ್ಲಿ ನಿಮಗೆ ಬೆಂಬಲ ಇದೆಯಾ?*

ಓ... ಶೂರ್. ಪತಿ ಜಯದ್ರತ ಎಂಜಿನಿಯರ್. ಗೆಳೆಯನ ಹಾಗೆ ಅವರು. ನನ್ನ ತಂದೆ ನಾರಾಯಣಸ್ವಾಮಿ ಬಿಸಿನೆಸ್‌ಮ್ಯಾನ್. ತಾಯಿ ಶೋಭಾ ನಂದಿನಿ– ಅವರು ಮೈಸೂರು ಮೂಲದವರು. ನಾನು ಹುಟ್ಟಿ ಬೆಳೆದದ್ದು ಬೆಂಗಳೂರಲ್ಲಿ. ಚಿಕ್ಕಂದಿನಿಂದ ನನಗೆ ಮೇಕಪ್, ಡ್ರೆಸ್ ಇದೆಲ್ಲ ತುಂಬಾ ಇಷ್ಟ ಇತ್ತು. ಕನ್ನಡಿ ಮುಂದೆ ಎಷ್ಟೋ ಹೊತ್ತು ನಿಂತು ಬಿಡ್ತಿದ್ದೆ. ಅಮ್ಮ ಸಾಕು ಬಾರೇ... ಅಂತ ಕರೆಯೋರು. ಕಾಲೇಜ್ ದಿನಗಳಲ್ಲಿ ಮಾಡೆಲಿಂಗ್ ಮಾಡ್ತಿದ್ದೆ. ಅಲ್ಲಿಂದ ಅಭಿನಯಕ್ಕೆ ಹಾಬಿ ಅಂತ ಬಂದೆ. 2,000 ಇಸ್ವಿಯಲ್ಲಿ ‘ಭೂಮಿಕಾ’ದಲ್ಲಿ ದಿಟ್ಟ ಹುಡುಗಿ ಪಾತ್ರದಲ್ಲಿ ಅಭಿನಯಿಸಿದೆ. ಅದೇ ಸಂದರ್ಭದಲ್ಲಿ ದೂರದರ್ಶನದ ‘ಅರ್ಧಸತ್ಯ’ದಲ್ಲಿ ಮಂಡ್ಯ ರಮೇಶ್ ಜತೆ ಅನು ಪಾತ್ರ ಮಾಡಿದೆ. ಆಮೇಲೆ ನಟನೆಯೇ ವೃತ್ತಿಯೇ ಆಯಿತು.

*ಸಿಲ್ಲಿ ಲಲ್ಲಿ ಹೌಸ್‌ನಲ್ಲಿ ‘ಅಮ್ಮ ನಿನಗಾಗಿ’ ಚಿತ್ರೀಕರಣ ನಡೆದಿತ್ತು. ಫೋಟೋಗ್ರಾಫರ್ ನಾಗೇಶ್‌ಕುಮಾರ್ ಜತೆ ಬಂದಿದ್ದಾಗ ನೀವು ಸಿಕ್ಕಿದ್ರಿ. ಆದರೆ ಧಾರಾವಾಹಿಯಲ್ಲಿ ನಿಮ್ಮ ಪಾತ್ರ ಇನ್ನೂ ಬರ್ತಾ ಇಲ್ಲ...*

ಇಲ್ಲ. ಅದರಲ್ಲಿ ಆಫರ್ ಬಂತು ಅಂತ ಹೋದೆ. ಎರಡು ದಿನ ನನ್ನ ಅಭಿನಯದ ಷೂಟಿಂಗ್ ಸಹ ಆಯಿತು. ಅದೇ ದಿನ ನೀವು ಬಂದಿದ್ದಿರಿ. ಆದರೆ ನನ್ನ ಮುಂದಿನ ದಿನಗಳಿಗೆ ಡೇಟ್ಸ್ ಹೊಂದಾಣಿಕೆ ಆಗಲಿಲ್ಲ ಅಂತ ಆ ಪಾತ್ರ ಬಿಡಬೇಕಾಯಿತು. ಈಗ ಹೇಮಾ ದತ್ ಆ ಪಾತ್ರ ಮಾಡ್ತಾರೆ.

*ಬರಗೂರು ರಾಮಚಂದ್ರಪ್ಪನವರ ‘ಶಬರಿ’ ಚಿತ್ರದ ನಾಯಕಿಯಾಗಿ ಚೆನ್ನಾಗಿ ಅಭಿನಯಿಸಿದ್ದೀರಿ. ಅದು ಪನೋರಮಾ ಉತ್ಸವಕ್ಕೆ ಆಯ್ಕೆಯಾದ ಚಿತ್ರ. ಮತ್ತೆ ಟಿವಿ ಧಾರಾವಾಹಿಗಳಿಗೆ ಹಿಂತಿರುಗಲು ಕಾರಣ ಏನು?*

5–6 ಸಿನಿಮಾಗಳಲ್ಲಿ ಮಾಡಿದೆ. ಟಿವಿಯಲ್ಲಿ ಒಳ್ಳೆಯ ಆಫರ್ಸ್ ಇದ್ದವು. ಇಲ್ಲಿ ಅಭಿನಯ ಕೂಡ ತುಂಬಾ ಸವಾಲಿನದೇ. ಸದಾ ಹೀರೋಯಿನ್ ಪಾತ್ರನೇ ಮಾಡಬೇಕು ಅನ್ನೋದಕ್ಕಿಂತ ಒಳ್ಳೆಯ ಪಾತ್ರಗಳನ್ನು ಮಾಡಬೇಕು ಅನ್ನೋ ಆಸೆ.

*ಜನ ಯಾವುದರಲ್ಲಿ ನಿಮ್ಮನ್ನ ಹೆಚ್ಚಾಗಿ ಗುರುತಿಸ್ತಾರೆ?*

ಟಿವಿ ಧಾರಾವಾಹಿಗಳಲ್ಲೇ ಹೆಚ್ಚು ಗುರುತಿಸ್ತಾರೆ. ಸಿನಿಮಾ ಯಾವಾಗಲೋ ಯಾರೋ ಕೆಲವರು ನೋಡೋದು. ಹಿಟ್ ಆದ್ರೆ ಮಾತ್ರ ಬಹಳ ಜನ ನೋಡ್ತಾರೆ. ಟಿವಿಯಲ್ಲಿ ಹಾಗಲ್ಲ, ದಿನಾಲು ಬರ್ತೀವಲ್ಲ, ಅದೂ ಕಾರಣ ಇರಬಹುದು.

*ಸಿನಿಮಾ ಟಿವಿ ಇಬ್ಬರೂ ನಿರ್ದೇಶಕರ ಹತ್ತಿರ ಕೆಲಸ ಮಾಡಿದಾಗ ಏನನಿಸುತ್ತೆ?*

ಟಿವಿಯಲ್ಲಿ ದಿನಕ್ಕೆ ಒಂದು ಸಂಚಿಕೆ ಮುಗಿಸುವ ಒತ್ತಡ ಇರುತ್ತೆ. ಹೊಸದಾಗಿ ಏನನ್ನಾದರೂ ಸೃಷ್ಟಿಸೋದಕ್ಕೆ, ಸೃಜನಶೀಲರಾಗಿರೋದಕ್ಕೆ ಹೆಚ್ಚು ಮಿತಿಗಳಿರ್ತಾವೆ. ಯಥೇಚ್ಛವಾಗಿ ದುಡ್ಡು ಖರ್ಚು ಮಾಡೋಕೆ ಆಗಲ್ಲ. ನಟಿಗೆ ಟಿವಿಯಾಗಲಿ, ಸಿನಿಮಾ ಆಗಲಿ– ಎರಡೂ ಒಂದೇ.

■ ನಾಗು

